**ಮೂ.ದಾ.ನಂ. 38/2018**

ಡಿ.ಡಬ್ಲ್ಯು.1

(ಇಂದು ದಿನಾಂಕ: **12-01-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ. ಪಿ.ಜಿ.ಎಚ್. ವಕೀಲರಿಂದಃ**

ವಾದಿ ಹಾಗೂ ಜುಜೇ ಫ್ರಾನ್ಸಿಸ ರೊಡ್ರಿಗಸ್ ಇವರ ವಿರುದ್ಧ ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿ. ಸದ್ರಿ ದೂರು ಮಾನ್ಯ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ನ್ಯಾಯಾಲಯದಲ್ಲಿ ವಿಶೇಷ ಮೊಕದಮ್ಮೆ ನಂಬರ 129/2020 ಎಂದು ದಾಖಲಾಗಿದೆ ಎಂದರೆ ಸಾಕ್ಷಿಯು ಸದ್ರಿ ಮೊಕದಮ್ಮೆಯನ್ನು ನಾವು ಮಾಡಿರುವುದಿಲ್ಲ ಅದನ್ನು ಕೆಇಬಿ ಯವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ಪ್ರಕರಣ ದಲ್ಲಿ ವಾದಿ ಹಾಗೂ ಜುಜೇ ಫ್ರಾನ್ಸಿಸ ರೊಡ್ರಿಗಸ್ ಇವರನ್ನು ನಿರಪರಾಧಿ ಎಂದು ಬಿಡುಗಡೆ ಮಾಡಲಾಗಿದೆ ಎಂದರೆ ಸಾಕ್ಷಿಯು ನಾನು ಸದ್ರಿ ಪ್ರಕರಣದಲ್ಲಿ ಕೇವಲ ನಾನು ಸಾಕ್ಷಿದಾರನಾಗಿರುತ್ತೇನೆ ಆ ಪ್ರಕರಣವು ಏನು ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದ್ರಿ ದಾಖಲಾತಿಯು ವಿಶೇಷ ಮೊಕದಮ್ಮೆ ಸಂಖ್ಯೆ 129/2020 ರಲ್ಲಿ ಆದ ಆದೇಶ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯು ದಾವಾ ಸಂಗಡ ಹಾಜರುಪಡಿಸಿದ ಹಾತ್ ನಕಾಶೆಯು ದಾವಾ ಆಸ್ತಿಯ ವಸ್ತು ಸ್ಥಿತಿಗೆ ಸರಿಯಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ದಾವಾ ಹಾತ್ ನಕಾಶೆಯಲ್ಲಿ ತೋರಿಸಿಲಾಗಿ ಸದ್ರಿ ದಾಖಲಾತಿಯ ಪೂರ್ವ ದಿಕ್ಕಿನಲ್ಲಿ ಎಸ್.ಬಿ.ಆಯ್ ನಿಂದ ಎಪಿಎಮ್‌ಸಿ ಗೆ ಹೋಗುವ ರಸ್ತೆ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು

ನುಡಿಯುತ್ತಾರೆ. ಸದ್ರಿ ದಾಖಲಾತಿಯಲ್ಲಿ ಪೂರ್ವ ದಿಕ್ಕಿನಲ್ಲಿ ಇರುವ ರಸ್ತೆಯ ತಗ್ಗಿನ ಭಾಗದಲ್ಲಿ ಪಶ್ಚಿಮ ದಿಕ್ಕಿನಲ್ಲಿ ವಾದಿಯ ಮನೆ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಎಸ್.ಬಿ.ಆಯ್ ನಿಂದ ಎ.ಪಿ.ಎಮ್.ಸಿ. ಗೆ ಹೋಗುವ ರಸ್ತೆಯಲ್ಲಿ ಬಹಳಷ್ಟು ಸಲ ಓಡಾಡಿದ್ದೇನೆ ಎಂದರೆ ಸರಿ. ಸದ್ರಿ ರಸ್ತೆಯ ಪಶ್ಚಿಮ ದಿಕ್ಕಿನಲ್ಲಿ ವಾದಿಯ ಮನೆ ಇರುವ ವಿಷಯ ನನಗೆ ತಿಳಿದಿದೆ. ಹಾತ್ ನಕಾಶೆಯಲ್ಲಿ ತೋರಿಸಿದಂತೆ ಎ ಎಂದು ಗುರುತಿಸಿದ ವಿದ್ಯುತ್ ಕಂಭದ ವಾಯರ್ ವಾದಿಯ ಮನೆಯ ಮೇಲಬದಿಗೆ ಹಾದು ಹೋಗಿದೆ ಎಂದರೆ ಸಾಕ್ಷಿಯು ನನಗೆ ಹಾತ್ ನಕಾಶೆಯಲ್ಲಿ ತಿಳಿಯುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸ್ಥಳದಲ್ಲಿ ನೋಡಿದಂತೆ ಸದ್ರಿ ವಿದ್ಯುತ್ ಕಂಭದ ವಾಯರ್ ವಾದಿಯ ಮನೆಯ ಮೇಲುಗಡೆ ಹಾದು ಹೋಗಿದೆ ಎಂದರೆ ಸಾಕ್ಷಿಯು ಸದ್ರಿ ವಿದ್ಯುತ್ ಕಂಭದ ವಾಯರ್ ನನ್ನ ಅಜ್ಜನ ಕಾಲದಿಂದ ಅಸ್ತಿತ್ವದಲ್ಲಿ ಇದ್ದು, ವಾದಿಯು ಇತ್ತೀಚೆಗೆ ಮನೆ ಕಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ವಿದ್ಯುತ್ ಇಲಾಖೆಯವರು ಬೇರೆ ವಿದ್ಯುತ್ ಕಂಭದಿಂದ ವಿದ್ಯುತ್ ನ್ನು ನಮಗೆ ಸರಬರಾಜು ಮಾಡಿದರೆ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ.

ಮನೆಯ ಮೇಲುಗಡೆ ವಿದ್ಯುತ್ ತಂತಿಗಳು ಹಾದು ಹೋದರೆ ಮಳೆಗಾಲದಲ್ಲಿ ಮಾನವ ಜೀವಕ್ಕೆ ಅಪಾಯ ಆಗುವ ತೊಂದರೆ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಕಾರಣದಿಂದಲೇ 1ನೇ ಪ್ರತಿವಾದಿಯು ನಮ್ಮ ಮನೆಗೆ ಬೇರೆ ಕಡೆಯಿಂದ ವಿದ್ಯುತ್ ಸಂಪರ್ಕವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ನಾವು ವಾದಿಯ ದಾವೆಗೆ ಸಲ್ಲಿಸಿರುವ ತಕರಾರನ್ನು ನೋಡಿರುತ್ತೇನೆ. ಸದ್ರಿ ಪ್ರತಿವಾದ ಪತ್ರದಲ್ಲಿ ವಾದಿಯು ಸಲ್ಲಿಸಿದ ಹಾತ್ ನಕಾಶೆಯ ಕುರಿತು ಯಾವುದೇ ತಕರಾರನ್ನು

ಸಲ್ಲಿಸಿರುವುದಿಲ್ಲ ಎಂದರೆ ಸರಿ. ವಾದಿಯು ಹಾಜರುಪಡಿಸಿದ ಹಾತ್ ನಕಾಶೆಯಲ್ಲಿ ತೋರಿಸಿದಂತೆ ಎ ಎಂಬ ವಿಧ್ಯುತ್ ಕಂಬದಿಂದ ಬಿ ಎಂಬ ವಿಧ್ಯುತ್ ಕಂಬಕ್ಕೆ ಹಾದು ಹೋದ ವಿಧ್ಯುತ್ ತಂತಿಗಳನ್ನು ತೆಗೆದರೆ ನನಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ಸಲ್ಲಿಸಿದ ಹಾತ್ ನಕಾಶೆಯಲ್ಲಿ ತೋರಿಸಿದಂತೆ ಎ ಎಂಬ ವಿಧ್ಯುತ್ ಕಂಭದಿಂದ ನಮ್ಮ ಮನೆಗೆ ಯಾವುದೇ ವಿಧ್ಯುತ್ ತಂತಿಗಳನ್ನು ಅಳವಡಿಸಿಲ್ಲ ಎಂದರೆ ಸಾಕ್ಷಿಯು ನನಗೆ ಹಾತ್ ನಕಾಶೆಯ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ವಾದಿಯ ಮನೆಯ ಮೇಲಗಡೆ ಇರುವ ಎಪಿಎಮ್‌ಸಿ ರಸ್ತೆಯಲ್ಲಿ ಇರುವ ವಿಧ್ಯುತ್ ಕಂಭದಿಂದ ನಮ್ಮ ಮನೆಗೆ ಯಾವುದೇ ವಿಧ್ಯುತ ತಂತಿಯನ್ನು ಅಳವಡಿಸಿಲ್ಲ ಎಂದರೆ ಸರಿ. ವಾದಿಯ ಹಾತ್ ನಕಾಶೆಯಲ್ಲಿ ತೋರಿಸಿದ ಬಿ ಎಂಬ ವಿಧ್ಯುತ್ ಕಂಭದಿಂದ ಪ್ರತ್ಯೇಕ ವಿಧ್ಯುತ್ ತಂತಿಯನ್ನು ಅಳವಡಿಸಲಾಗಿದೆ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂಬರ 90 ಹಿಸ್ಸಾ 2 ರಲ್ಲಿ ಇರುವ ಕಂಭದಿಂದ ವಾದಿಯ ಹಾತ್ ನಕಾಶೆಯಲ್ಲಿ ಇರುವ ಬಿ ಎಂಬ ವಿಧ್ಯುತ್ ಕಂಭಕ್ಕೆ ವಿಧ್ಯುತ್ ತಂತಿಯನ್ನು ಅಳವಡಿಸಲಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಹಾತ್ ನಕಾಶೆಯಲ್ಲಿ ತೋರಿಸಿದ ಎ ಎಂಬ ವಿಧ್ಯುತ್ ಕಂಭದಿಂದ ಬಿ ಎಂಬ ವಿಧ್ಯುತ ಕಂಭಕ್ಕೆ ತಂತಿಗಳಲ್ಲಿ ಈಗ ಯಾವುದೇ ವಿಧ್ಯುತ್ ಸರಬರಾಜು ಆಗುತ್ತಿಲ್ಲ ಎಂದರೆ ಸಾಕ್ಷಿಯು ಹಾತ್ ನಕಾಶೆಯಲ್ಲಿ ಇರುವ ವಿಷಯ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

ವಾದಿಯ ಮೇಲೆ ದ್ವೇಷದಿಂದ 1ನೇ ಪ್ರತಿವಾದಿಯಲ್ಲಿ ತಕರಾರನ್ನು ಸಲ್ಲಿಸಿ ಎ ಎಂಬ ವಿಧ್ಯುತ್ ಕಂಭದಿಂದ ಬಿ ಎಂಬ ವಿಧ್ಯುತ್ ಕಂಭಕ್ಕೆ ನಾನು ವಿಧ್ಯುತ್‌ನ್ನು ಹರಿಯುವಂತೆ ಮಾಡಲು ಪ್ರಯತ್ನಿಸಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಸಂಸ್ಥೆಯವರು ದಾವಾ ಹಾತ್ ನಕಾಶೆಯಲ್ಲಿ ತೋರಿಸಿದ ಎ ಎಂಬ

**ಮೂ.ದಾ.ನಂ. 38/2018**

ಡಿ.ಡಬ್ಲ್ಯು.1

ವಿದ್ಯುತ್ ಕಂಭದಿಂದ ಬಿ ಎಂಬ ವಿದ್ಯುತ್ ಕಂಭಕ್ಕೆ ಹಾಕಿದ ತಂತಿಯನ್ನು ತೆಗೆದು ಹಾಕಿದರೆ ನನಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ.

1ನೇ ಪ್ರತಿವಾದಿಯು ಸರ್ವೆ ನಂಬರ 90 ಹಿಸ್ಸಾ 2 ರಲ್ಲಿ ಇರುವ ವಿದ್ಯುತ್ ಕಂಭದಿಂದ ದಾವಾ ಹಾತ್ ನಕಾಶೆಯಲ್ಲಿ ಬಿ ಎಂಬ ಕಂಭಕ್ಕೆ ಈಗಾಗಲೇ ವಿದ್ಯುತ್ ಸರಬರಾಜು ತಂತಿಯನ್ನು ಎಳೆದಿದ್ದಾರೆ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

1ನೇ ಪ್ರತಿವಾದಿಯು ಸರ್ವೆ ನಂಬರ 90 ಹಿಸ್ಸಾ 2 ರಲ್ಲಿ ಇರುವ ವಿದ್ಯುತ್ ಕಂಭದಿಂದ ದಾವಾ ಹಾತ್ ನಕಾಶೆಯಲ್ಲಿ ಬಿ ಎಂಬ ಕಂಭಕ್ಕೆ ಈಗಾಗಲೇ ವಿದ್ಯುತ್ ಸರಬರಾಜು ತಂತಿಯನ್ನು ಅಳವಡಿಸಿದ್ದು, ಅದರಿಂದಲೇ ನಮ್ಮ ಮನೆಗೆ ವಿದ್ಯುತ್ ಸರಬರಾಜು ಆಗುತ್ತಿದೆ ಎಂದರೆ ಸರಿಯಲ್ಲ.

ದಾವಾ ಹಾತ್ ನಕಾಶೆಯಲ್ಲಿ ತೋರಿಸಿದ ಎ ಎಂಬ ವಿದ್ಯುತ್ ಕಂಭದಿಂದ ಬಿ ಎಂಬ ವಿದ್ಯುತ್ ಕಂಭಕ್ಕೆ ಕೇವಲ ತಂತಿಗಳು ಮಾತ್ರ ಇದ್ದು, ಪ್ರಸ್ತುತ ಯಾವುದೇ ವಿದ್ಯುತ್ ಸರಬರಾಜು ಆಗುತ್ತಿಲ್ಲ ಎಂದರೆ ಸಾಕ್ಷಿಯು ನನಗೆ ಈ ಬಗ್ಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನಾನು 1ನೇ ಪ್ರತಿವಾದಿಗೆ ಒತ್ತಡ ತಂದು ಎ ಎಂಬ ವಿದ್ಯುತ್ ಕಂಭದಿಂದ ಬಿ ಎಂಬ ವಿದ್ಯುತ್ ಕಂಭಕ್ಕೆ ವಿದ್ಯುತ್ ಹರಿಸಿ ಎಂದು ಒತ್ತಾಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ಮೇಲಿನ ದ್ವೇಷದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಯಲ್ಲ.

**ಮರು ವಿಚಾರಣೆ ಇಲ್ಲ.**

ಡಿ.ಡಬ್ಲ್ಯು.1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ